## ಭಾರತದಲ್ಲೂ ಹೊಸ ಸಾಹಸ

'ಆಕ್ಸೆಂಚರ್' ಕಂಪೆನಿಯು ತನ್ನ ಸುದ್ದಿಪತ್ರದಲ್ಲಿ 2019ರ ಹೊತ್ತಿಗೆ 'ಕೃತಕ ಬುದ್ಧಿಮತ್ತೆ' ಕ್ಷೇತ್ರದಲ್ಲಿ ಬಂಡವಾಳ ಹೂಡಲಾಗುವುದು ಎಂದು ಪ್ರಕಟಿಸಿತು. ಇನ್ನು ಮೂರು ವರ್ಷಗಳಲ್ಲಿ ಏನಿಲ್ಲವೆಂದರೂ 61,640 ಕೋಟಿ ರೂಪಾಯಿ ಹಣವನ್ನು ಕೃತಕ ಜ್ಞಾನ ಕ್ಷೇತ್ರದ ಅಭಿವೃದ್ಧಿಗಾಗಿ ಖರ್ಚು ಮಾಡಲಾಗುವುದು. 2014ಕ್ಕೆ ಹೋಲಿಸಿದರೆ ಇದು ದುಪ್ಪಟ್ಟು ಮೊತ್ತ. 'ಇಂಟರ್‌ನ್ಯಾಷನಲ್ ಡೇಟಾ ಕಾರ್ಪೊರೇಷನ್' (ಐಡಿಸಿ) ಕೊಟ್ಟಿರುವ ಅಂಕಿ–ಅಂಶ ಇದು.

ವಿಮಾ ಹಣವನ್ನು ವಾಪಸ್ ಪಡೆಯುವುದು, ವಂಚನೆ ಪತ್ತೆ, ಮದ್ದು ಪರೀಕ್ಷೆ, ಬಹುಮುಖಿ ಕಾರ್ಯಗಳನ್ನು ನಿರ್ವಹಿಸುವ ತಂತ್ರಜ್ಞಾನ ವ್ಯವಸ್ಥೆ, ಔಷಧ ಉತ್ಪಾದನೆ ಇವೇ ಮೊದಲಾದ, ಜನರ ನಿತ್ಯಬಳಕೆಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಕೃತಕ ಜ್ಞಾನ ಶಾಖೆಗಳು ವಿಸ್ತಾರವಾಗಲಿವೆ. ಭಾರತ ಕೂಡ ಗ್ರಾಹಕ ರಾಷ್ಟ್ರಗಳಲ್ಲಿ ಒಂದು ಎನ್ನುವುದು ಮುಖ್ಯ.

ವೈದ್ಯಕೀಯ, ಶಿಕ್ಷಣ, ಕೈಗಾರಿಕೋದ್ಯಮದಂಥ ಪ್ರಮುಖ ಕ್ಷೇತ್ರಗಳಲ್ಲಿ ಕೃತಕ ಜ್ಞಾನ ಶಾಖೆಗಳು ಊಹೆಗೂ ಮೀರಿ ಬೆಳೆಯಲಿವೆ.

ಬೆಂಗಳೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ 'ಐಂಡ್ರಾ' ಕಂಪೆನಿಯ 'ಸ್ಮಾರ್ಟ್ ಅಟೆಂಡೆನ್ಸ್ ಎಂಟರ್‌ಪ್ರೈಸ್' ಸ್ಮಾರ್ಟ್‌ಫೋನ್ ಆಧರಿಸಿದ ಉತ್ಪನ್ನ. 2012ರಲ್ಲಿ ಪ್ರಾರಂಭವಾದ ಈ ಕಂಪೆನಿಯು ಈಗ ಕೃತಕ ಬುದ್ಧಿಮತ್ತೆಯನ್ನೇ ಬಂಡವಾಳ ಮಾಡಿಕೊಂಡು ಹೆಚ್ಚು ವೇಗವಾಗಿ ಬೆಳೆಯುತ್ತಿದೆ.

ಹವಾಮಾನ ಮಾಹಿತಿ ದಕ್ಕಿಸಿಕೊಡುವ ವ್ಯವಸ್ಥೆಗೆ ಮಾರುಕಟ್ಟೆ ಒದಗಿಸಿರುವ 'ಬ್ರೈನಾಸಾಫ್ಟ್', ಅಹಮದಾಬಾದ್‌ನ 'ಐಐಎಂ'ನಿಂದ ಹೊರಬಂದ ರಾಘವ್ ಹಾಗೂ ಅಭಿನವ್ ಅಗರ್‌ವಾಲ್ ಸಹೋದರರು ಪ್ರಾರಂಭಿಸಿದ 'ಫ್ಲುಇಡ್ ಎಐ' ಇನ್ನೊಂದು ಆಸಕ್ತಿಕರ ಕಂಪೆನಿ. ಕಂಪೆನಿಗಳು ತಮ್ಮ ಉತ್ಪನ್ನಗಳ ಬೇಡಿಕೆ ಹಾಗೂ ಭವಿಷ್ಯದಲ್ಲಿ ಆಗುವ ಬದಲಾವಣೆಗಳನ್ನು ದತ್ತಾಂಶ ವಿಶ್ಲೇಷಣೆಯ ಮೂಲಕ ಅಂದಾಜು ಮಾಡಲು ಅಗತ್ಯ ಕೃತಕ ಜ್ಞಾನ ವ್ಯವಸ್ಥೆಯನ್ನು 'ಬ್ರೈನಾಸಾಫ್ಟ್' ಒದಗಿಸುತ್ತದೆ.

ಚೆನ್ನೈ ಹಾಗು ಕ್ಯಾಲಿಫೋರ್ನಿಯಾದಲ್ಲಿ ಕಚೇರಿಗಳನ್ನು ಹೊಂದಿರುವ 'ಮ್ಯಾಡ್ ಸ್ಟ್ರೀಟ್ ಡೆನ್' ಕಂಪ್ಯೂಟರ್ ದೂರದೃಷ್ಟಿಯ ಕೃತಕ ಜ್ಞಾನಾಧಾರಿತ ಕಂಪೆನಿ. ವ್ಯಾಪಾರ ವರ್ಧನೆ ಹಾಗೂ ಶಾಪಿಂಗ್ ಮಾರುಕಟ್ಟೆ ಉತ್ತೇಜನಕ್ಕೆ ಪೂರಕವಾಗಿ ಈ ಕಂಪೆನಿ ಬೆಳೆಯುತ್ತಿದೆ.

'ಬಿಟುಬಿ' ವೇದಿಕೆ ಕಲ್ಪಿಸಿರುವ 'ಮಾರ್ಫ್ ಡಾಟ್ ಎಐ' ವಿವಿಧ ಅಗತ್ಯಗಳಿಗೆ ಹೊಂದಬಲ್ಲ ರೋಬೋಗಳನ್ನು ರೂಪಿಸಿಕೊಡುತ್ತದೆ. 'ನಿಕಿ ಡಾಟ್ ಎಐ', 'ಸಿಗ್ ಟಪಲ್', 'ಸ್ಲೆಡೂಲ್', 'ಸ್ಟ್ಯಾಕ್ಯು ಟೆಕ್ನಾಲಜೀಸ್', 'ವಿ ಫ್ರೇಸ್' ಇವೆಲ್ಲವೂ ಭಾರತೀಯ ಮಾರುಕಟ್ಟೆಯನ್ನೇ ಮುಖ್ಯವಾಗಿ ಗುರಿಯಾಗಿಸಿಕೊಂಡು ಕೆಲವು ವರ್ಷಗಳ ಹಿಂದೆ ಪ್ರಾರಂಭವಾಗಿರುವ ನಮ್ಮ ದೇಶದ ಕಂಪೆನಿಗಳು.

ಹೊಸದಾಗಿ ಶುರುವಾಗುತ್ತಿರುವ ಬಹುತೇಕ ಸಣ್ಣ ಪ್ರಮಾಣದ ಕಂಪೆನಿಗಳು ಕೃತಕ ಜ್ಞಾನಾಧಾರಿತ ವ್ಯವಸ್ಥೆಯನ್ನೇ ಅವಲಂಬಿಸಿ ಯೋಜನೆಗಳನ್ನು ರೂಪಿಸುತ್ತಿರುವುದು ಈ ಕ್ಷೇತ್ರದ ಕುರಿತು ಕುತೂಹಲ ಇದೆಯೆನ್ನುವುದಕ್ಕೆ ಸಾಕ್ಷಿ.

ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಪೂರ್ಣ ಪ್ರಮಾಣದಲ್ಲಿ ಶುಶ್ರೂಷಕಿಯರನ್ನು ನೇಮಿಸಿಕೊಂಡರೆ ವರ್ಷಕ್ಕೆ ಎಷ್ಟು ಖರ್ಚಾಗುತ್ತದೋ ಅದರಲ್ಲಿ ಶೇಕಡಾ 20ರಷ್ಟು ಹಣ ಮಾತ್ರ ಈ ರೋಬೋಗಳಿಗೆ ಬಾಡಿಗೆ ತೆತ್ತರೆ ಸಾಕೆನ್ನುವುದು ಕಂಪೆನಿಯ ಮಂತ್ರ. 'ಹೋಮ್ ಕೇರ್ ಅಸಿಸ್ಟೆನ್ಸ್' ಕಂಪೆನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಲಿಲಿ ಸರಫಾನ್ ಪ್ರಕಾರ, ಇನ್ನು ಐದರಿಂದ ಏಳು ವರ್ಷಗಳಲ್ಲಿ ಅವರು ಕೈಹಾಕಿರುವ ಈ ವ್ಯಾಪಾರ ಕಳೆಗಟ್ಟಲಿದೆ.

'ಬ್ರೂಕ್ಡೇಲ್ ಸೀನಿಯರ್ ಲಿವಿಂಗ್' ಎಂಬ, ಹಿರಿಯ ನಾಗರಿಕರಿಗೆ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಿಕೊಟ್ಟಿರುವ ಸಂಸ್ಥೆಯೊಂದು ಕೂಡ ತಂತ್ರಜ್ಞಾನವನ್ನೂ ವಯೋವೃದ್ಧರನ್ನೂ ಬೆಸೆಯುವ ನಿಟ್ಟಿನಲ್ಲಿ ಯೋಚಿಸತೊಡಗಿದೆ. ವೃದ್ಧರಷ್ಟೇ ವಾಸಿಸುವ ಮನೆಗಳಲ್ಲಿ ಅವರ ನಿತ್ಯದ ಬದುಕಿಗೆ ಬೇಕಾದ ನೆರವು ನೀಡಬಲ್ಲ ತಂತ್ರಜ್ಞಾನ ಹೇಗಿರಬೇಕು ಎಂದು ಅದು ಮಂಥನ ನಡೆಸಿದ್ದು, ಗುಳಿಗೆಗಳನ್ನು ಯಾವಾಗ ತೆಗೆದುಕೊಳ್ಳಬೇಕು ಎನ್ನುವುದನ್ನು ಸೂಚಿಸುವ, ಅವನ್ನು ಆರ್ಡರ್ ಮಾಡುವ ಆ್ಯಪ್‌ಗಳ ಅಗತ್ಯವನ್ನು ಮನಗಂಡಿದೆ.

ಅಮೆರಿಕದಲ್ಲಿ ಇಂಥ ಸನ್ನಿವೇಶಗಳೀಗ ಮಾಮೂಲಾಗಿವೆ. ಬ್ರೂಕ್ಡೇಲ್ ಕೂಡ ಅಲ್ಲಿಯದ್ದೇ ಕಂಪೆನಿ. ಅದರ ಕಾರ್ಯತಂತ್ರ ಹಾಗೂ ಯೋಜನಾ ನಿರ್ದೇಶಕ ಆಂಡ್ರೂ ಸ್ಮಿತ್ ಹೀಗೆನ್ನುತ್ತಾರೆ: 'ತಂತ್ರಜ್ಞಾನವು ಅಮೆರಿಕದ ಹಿರಿಯ ನಾಗರಿಕರ ಬದುಕನ್ನು ಕಳೆಗಟ್ಟಿಸಲಿದೆ. ಅನಾರೋಗ್ಯ ಹಾಗೂ ಸಾಮಾಜಿಕ ಒಂಟಿತನವನ್ನು ಮೀರಲು ನವೀನ ತಂತ್ರಜ್ಞಾನ ನೆರವಿಗೆ ಬರಲಿದೆ. ಅದು ಈ ಕಾಲದ ಅಗತ್ಯವೂ ಹೌದು.'

ವಯಸ್ಸಾದವರು ದೂರದ ದೇಶಗಳಿಗೆ ಪ್ರವಾಸ ಹೋಗುವುದು ದುಸ್ತರ. ಹಣವಿದ್ದರೂ ಎಷ್ಟೋ ಜನರಿಗೆ ದೇಹ ಸ್ಪಂದಿಸುವುದಿಲ್ಲ. ಹಾಗಾಗಿಯೇ ಇರುವ ಸ್ಥಳದಲ್ಲಿಯೇ 'ವರ್ಚುಯಲ್ ಟ್ರಿಪ್' ಆಯೋಜಿಸುವ ತಂತ್ರಜ್ಞಾನವೊಂದನ್ನು ಬ್ರೂಕ್ಡೇಲ್ ಜನಪ್ರಿಯಗೊಳಿಸಿದೆ. 67 ವರ್ಷ ವಯಸ್ಸಿನ ಅಬ್ದುಲ್ ಶಾಕುರ್ ಒಂದು ಕಾಲದಲ್ಲಿ ಹೆಸರುವಾಸಿ ಬಾಣಸಿಗ. ಬರ್ಲಿನ್‌ನ 'ಕ್ರಯೋಲ್ ರೆಸ್ಟೋರೆಂಟ್'ಗೆ ಹೋಗಬೇಕೆನ್ನುವುದು ಅವರ ಬಯಕೆಯಾಗಿತ್ತು. ಬ್ರೂಕ್ಡೇಲ್ ಅಪಾರ್ಟ್‌ಮೆಂಟಿನ ಉಸ್ತುವಾರಿ ನೋಡಿಕೊಳ್ಳುವ ಸಿಬ್ಬಂದಿ ಅವರ ಕಿವಿಗೆ ಒಂದು 'ವಿ.ಆರ್. ಹೆಡ್‌ಸೆಟ್' ತಂದು ಹಾಕಿದರು. ಕ್ರಯೋಲ್ ಹೋಟೆಲ್‌ನಲ್ಲಿ ಏನೆಲ್ಲಾ ಮೆನು ಇದೆ ಎನ್ನುವುದು ಶಾಕುರ್ ಕಿವಿಗೆ ಬಿತ್ತು. ಒಂದು ಕಾಲದಲ್ಲಿ ತಾನು ಕೆಲಸ ಮಾಡಿದ್ದ ರೆಸ್ಟೋರೆಂಟ್‌ನಲ್ಲಿ ಈಗ ಏನೆಲ್ಲಾ ಬದಲಾವಣೆ ಆಗಿದೆ ಎನ್ನುವುದನ್ನೂ ಶಾರೂಕ್ ಕೂತಲ್ಲೇ ದೊಡ್ಡ ಪರದೆಯ ಮೇಲೆ ನೋಡಿದರು.

ಕೆರೀಬಿಯಾ ದ್ವೀಪದ ಕಡಲತಡಗಳಲ್ಲಿ ಸಾಗಬೇಕೆನ್ನುವುದೂ ಅವರ ಕನಸಾಗಿತ್ತು. ಹೃದಯದ ಸಮಸ್ಯೆ ಇದ್ದಿದ್ದರಿಂದ ಅದು ಸಾಧ್ಯವಾಗಿರಲಿಲ್ಲ. ಅದು ಕೂಡ 'ವರ್ಚುಯಲ್ ಪ್ರವಾಸ'ದ ಮೂಲಕ ಈಡೇರಿತು. ಕಡಲತಡಿಯಲ್ಲಿ ನಿಂತ ಅನುಭವ ಅವರಿಗಾದದ್ದಷ್ಟೇ ಅಲ್ಲ, ಅಂಗಾಲಿನ ಕೆಳಗಿನ ಮರಳನ್ನು ನೀರು ದೂಡಿದಂತಾಗಿ ಕಚಗುಳಿ ಇಟ್ಟಂತೆಯೂ ಆಯಿತು. ತಮ್ಮ ಮನೆಯಲ್ಲೇ ಇಷ್ಟದ ಸ್ಥಳಗಳ ಪ್ರವಾಸ ಮಾಡಿದ ಅನುಭವ ದಕ್ಕಿಸಿಕೊಳ್ಳುತ್ತಿರುವ ಶಾಕುರ್ ಪಾಲಿಗೆ ಬದುಕು ಈಗೀಗ ಸುಖ ಎನಿಸತೊಡಗಿದೆ.

ರೆಂಡೆವರ್ ಎಂಬ ಕಂಪೆನಿಯು 'ವಿ.ಆರ್. ಹೆಡ್‌ಸೆಟ್' ಶೋಧಿಸಿದ್ದು. ಮಂದಕಿವಿಯ ಸಮಸ್ಯೆ ಇರುವವರಿಗೆ ಹಿತವಾದ ದನಿಗಳನ್ನು ದಕ್ಕಿಸಿಕೊಡುವ ಉದ್ದೇಶದಲ್ಲಿ ತಯಾರಾದ ಹೆಡ್‌ಸೆಟ್ ಇದು. ಡೆನಿಸ್ ಲ್ಯಾಲಿ ರೆಂಡೆವರ್ ಕಂಪೆನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸಹ ಸ್ಥಾಪಕ. ಅವರ ಅತ್ತೆಗೆ ಕಿವಿ ಮಂದವಾಗಿತ್ತು. ಆ ಸಮಸ್ಯೆ ನೀಗಿಸಲೆಂದು ಬೋಸ್ಟನ್‌ನಲ್ಲಿ ರೆಂಡೆವರ್ ಕಂಪೆನಿಯನ್ನು ಅವರು ಸ್ಥಾಪಿಸಿದ್ದು. ಮೆಸಾಚುಸೆಟ್ಸ್‌ನ ನೂರಾರು ವೃದ್ಧರ ಬಳಿಗೆ ಹೋಗಿ, ಅವರ 'ಬೇಕು'ಗಳಿಗೆ ತಂತ್ರಜ್ಞಾನ ಯಾವ ರೀತಿ ಸ್ಪಂದಿಸಲು ಸಾಧ್ಯ ಎಂದು ತಿಳಿದುಕೊಂಡು ಬರುವಂತೆ ಡೆನಿಸ್ ತಮ್ಮ ಸಿಬ್ಬಂದಿಗೆ ಸೂಚಿಸಿದ್ದರು. ಶಾಕುರ್ ಕಿವಿಮೇಲೆ ಬಿದ್ದ ದನಿ ಆ ಸಂಶೋಧನೆಯ ಫಲ.